ಹರಿಜನ ಗಿರಿಜನಗಳ ಭಾಗ್ಯ ಜ್ಯೋತಿ ಸೌಲಭ್ಯ

೧೧೮೩. ಶ್ರೀ ಬಿ. ಆರ್. ಗುರುದೇವ್, (ಆಲೂರು-ಸಕಲೇಶಪುರ):—ಮಾನ್ಯ ಕೈಗಾರಿಕೆ, ಇಂಧನ ಮತ್ತು ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:

ಅ) ಜನತಾ ಮನೆಗಳಿಗೆ ಭಾಗ್ಯಜ್ಯೋತಿ ಸೌಲಭ್ಯದನ್ವಯ ನೀಡಿದ ವಿದ್ಯುತ್‌ನ ಬಿಲ್ ಪಾವತಿಯಾಗದೆ ವಿದ್ಯುಚ್ಛಕ್ತಿ ಸೌಲಭ್ಯವನ್ನು ನಿಲ್ಲಿಸಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ? ಈ ಬಗ್ಗೆ ಕೈಗೊಳ್ಳಲಾದ ಕ್ರಮವೇನು?

ಆ) ಜಿಲ್ಲಾ ಪರಿಷತ್ ಮತ್ತು ಮಂಡಲ ಪಂಚಾಯತಿ ಬಾಬುಗಳಲ್ಲಿ ಹರಿಜನ ಗಿರಿಜನರಿಗೆ ಮೀಸಲಿಟ್ಟಿರುವ ಶೇಕಡಾ ೭೦ ರಷ್ಟು ಹಣವು ಖರ್ಚಾಗದೆ ಉಳಿದಿರುವುದು ನಿಜವೆ?

ಇ) ಹಾಗಿದ್ದಲ್ಲಿ ಈ ಹಣದಲ್ಲಿ ಹರಿಜನ ಗಿರಿಜನರ ವಿದ್ಯುಚ್ಛಕ್ತಿ ಬಿಲ್ ಪಾವತಿ ಮಾಡಲಂ ಆಲೋಚಿಸಿದೆಯೇ?

ಶ್ರೀ ಎಸ್. ಎಮ್. ಯಾಹ್ಯಾ (ಕೈಗಾರಿಕೆ, ಇಂಧನ ಮತ್ತು ವಕ್ಫ್ ಸಚಿವರು)

ಅ) ಬಂದಿದೆ. ಆದರೆ ಹೆಚ್ಚು ಬಾಕಿ ಇರುವ ಭಾಗ್ಯ ಜ್ಯೋತಿ ಗ್ರಾಹಕರುಗಳಿಗೆ ಬಾಕಿಯನ್ನು ಮಾಹೆಯಾನ ರೂ. ೧೦-೦೦ ಕ್ಕೂ ಕಡಿಮೆ ಇಲ್ಲದೆ ತಿಂಗಳ ಕಂತುಗಳಲ್ಲಿ (ತಿಂಗಳ ವಿದ್ಯುತ್ ಬಿಲ್ಲಿನ ಜೊತೆಗೆ) ತೀರಿಸಲಂ ಅವಕಾಶ ಕಲ್ಪಿಸಲಾಗಿದೆ.

ಆ)
ಇ) } ಈ ವಿಷಯವನ್ನು ಜಿಲ್ಲಾ ಪರಿಷತ್‌ಗಳು ಪರಿಶೀಲಿಸಬೇಕು.

ಗುಲ್ಬರ್ಗಾ ಜಿಲ್ಲಾ ವೆಂಟ್ರಿಕ್ ಪೂರ್ವ ವಿದ್ಯಾರ್ಥಿನಿಲಯದ ಸಮಸ್ಯೆಗಳು

೧೩೦೫. ಶ್ರೀ ಬಿ. ಎಸ್. ಚವ್ಹಾಣ್ (ಶಹಾಬಾದ್).—ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು, (ಸಮಾಜ ಕಲ್ಯಾಣ ಸಚಿವರ ಪರವಾಗಿ.) ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:

ಅ) ಗುಲ್ಬರ್ಗಾ ಜಿಲ್ಲೆಯಲ್ಲಿ ಹರಿಜನ ಗಿರಿಜನ ವೆಂಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳ ಸಂಖ್ಯೆ ಎಷ್ಟು? ಅವುಗಳ ಪೈಕಿ ಸರ್ಕಾರವು ನಡೆಸುವುದು ಎಷ್ಟು? ಹಾಗೂ ಖಾಸಗಿ ನಿಲಯಗಳೆಷ್ಟು?

ಆ) ಈ ವಿದ್ಯಾರ್ಥಿನಿಲಯದಲ್ಲಿ ವಾಸಿಸುವ ಮಕ್ಕಳಿಗೆ ಎಲ್ಲಾ ಸೌಲಭ್ಯಗಳನ್ನು ಒದಗಿಸಲಾಗಿದೆಯೇ?

ಇ) ಈ ವಿದ್ಯಾರ್ಥಿನಿಲಯಗಳಲ್ಲಿ ಪ್ರವೇಶ ಪಡೆಯಲಿಕ್ಕೆ ವಿದ್ಯಾರ್ಥಿಗಳ ಸಂಖ್ಯೆ ಸೀಮಿತವಾಗಿದೆಯೇ?

ಈ) ಪ್ರತಿ ವರ್ಷ ಬರುವ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿನಿಲಯದ ಸೌಕರ್ಯ ಕೊಡಲಾಗುತ್ತಿದೆಯೇ?

ಶ್ರೀ ಎಂ. ವೀರಪ್ಪ ಮೊಯ್ಲಿ (ಕಾನೂನು ಮಂತ್ರಿ ಮತ್ತು ಸಂಸದೀಯ ವ್ಯವಹಾರಗಳ ಸಚಿವರು).

ಅ) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗ ವೆಂಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳ ಸಂಖ್ಯೆ ೭೭

೧) ಇವುಗಳ ಪೈಕಿ ಸರ್ಕಾರ ನಡೆಸುತ್ತಿರುವ ವಿದ್ಯಾರ್ಥಿನಿಲಯಗಳ ಸಂಖ್ಯೆ—೫೯

೨) ಖಾಸಗಿ ಸಂಸ್ಥೆಗಳಿಂದ ನಡೆಸಲಾಗುತ್ತಿರುವ ವಿದ್ಯಾರ್ಥಿನಿಲಯಗಳ ಸಂಖ್ಯೆ—೧೮

ಆ) ಸರ್ಕಾರಿ ವಿದ್ಯಾರ್ಥಿನಿಲಯಗಳಲ್ಲಿರುವ ವಿದ್ಯಾರ್ಥಿಗಳಿಗೆ ಮಾತ್ರ ಊಟದ ಮತ್ತು ವಸತಿ ಜೊತೆಗೆ ಪಠ್ಯಪುಸ್ತಕ ಲೇಖನ ಸಾಮಗ್ರಿ ಉಡುಪು ಇತ್ಯಾದಿ ಸೌಲಭ್ಯಗಳನ್ನು ಒದಗಿಸಲಾಗಿದೆ.

ಖಾಸಗಿ ವಿದ್ಯಾರ್ಥಿನಿಲಯಗಳಲ್ಲಿ ಇರುವ ವಿದ್ಯಾರ್ಥಿಗಳಿಗೆ ಊಟ ಮತ್ತು ವಸತಿ ಮಾತ್ರ ಒದಗಿಸಲಾಗುತ್ತಿದೆ.

ಇ) ಹೌದು

ಈ) ಹೌದು